# ಬುದ್ಧಿಮಾತು ಹೇಳಿದರೆ ಕೇಳಬೇಕಮ್ಮ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 408.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 202.
3. **Note:** Lyrics in the above references books are fully matching and the singer has followed these lyrics.
4. **Note:** This song is not available in Shri Betageri Krishna Sharma and Shri Bengeri Huchha Rayaru books.

ರಾಗ: ಶಂಕರಾಭರಣ ತಾಳ: ಆದಿ

ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ, ಮಗಳೆ, ಮನ
ಶುದ್ಧಳಾಗಿ ಗಂಡನೊಡನೆ ಬಾಳಬೇಕಮ್ಮ ॥ ಪ ॥

ಅತ್ತೆ ಮಾವಗಂಜಿಕೊಂಡು ನಡೆಯಬೇಕಮ್ಮ, ಮಗಳೆ,
ಚಿತ್ತದೊಲ್ಲಭನನಕ್ಕರೆಯನ್ನು ಪಡೆಯಬೇಕಮ್ಮ
ಹೊತ್ತು ಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ, ಮಗಳೆ,
ಹತ್ತು ಮಂದಿ ಒಪ್ಪುವ ಹಾಗೆ ನುಡಿಯಬೇಕಮ್ಮ ॥ ೧ ॥

ಕೊಟ್ಟು ಕೊಂಬುವ ನೆಂಟರೊಡನೆ ದ್ವೇಷ ಬೇಡಮ್ಮ, ಮಗಳೆ,
ಅಟ್ಟು ಉಂಬುವ ಕಾಲದಲ್ಲಿ ಆಟ ಬೇಡಮ್ಮ
ಹಟ್ಟಿ ಬಾಗಿಲಲ್ಲಿ ಬಂದು ನಿಲ್ಲಬೇಡಮ್ಮ, ಮಗಳೆ,
ಕಟ್ಟಿ ಆಳುವ ಗಂಡನೊಡನೆ ಸಿಟ್ಟು ಬೇಡಮ್ಮ ॥ ೨ ॥

ನೆರೆಹೊರೆಯವರಿಗೆ ನ್ಯಾಯವನ್ನು ಹೇಳಬೇಡಮ್ಮ, ಮಗಳೆ,
ಗರುವ ಕೋಪ ಮತ್ಸರವನ್ನು ಮಾಡಬೇಡಮ್ಮ
ಪರರ ನಿಂದಿಪ ಹೆಂಗಳೊಡನೆ ಸೇರಬೇಡಮ್ಮ, ಮಗಳೆ,
ಗುರು ಪುರಂದರ ವಿಠಲನ ಸ್ಮರಣೆ ಮರೆಯಬೇಡಮ್ಮ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮನಶುದ್ಧಳಾಗಿ** – ಅಂತರಂಗಶುದ್ಧಿಯಿಂದ.

**ಚಿತ್ತದೊಲ್ಲಭನ** – ಚಿತ್ತದ ವಲ್ಲಭನ, ಗಂಡನ.

**ಅಟ್ಟು** – ಅಡುಗೆಮಾಡಿ.

**ಹಟ್ಟಿ** = ಮನೆ

**Classification:** Keerthane
**Ankita:** Guru purandara vittala
**Location:** NA
**Category:** Jeevana Darshana
**Sub-Category:** magalu, buddi, pati, atte, mava, mane, jana, bandhu, bagilu, garva, sittu, bayyi, hengasu, smarane,
**Pravachana:** NA
**Explanation:** NA